CW.11 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.793/2018

| | |
|---|---|
| ಸಾಕ್ಷಿದಾರರ ಹೆಸರು | ಈಶ್ವರಪ್ಪ |
| ತಂದೆಯ ಹೆಸರು | ಲೇಟ್ ಎಸ್ ಪರಶಿವಯ್ಯ |
| ವಯಸ್ಸು | 68 ವರ್ಷ |
| ವೃತ್ತಿ | ನಿವೃತ್ತ ಪಿ ಎಸ್ ಐ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 24.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು ಆರೋಪಿಯನ್ನು ನೋಡಿರುವುದಿಲ್ಲ.

ನಾನು 03.05.2016 ರಿಂದ 31.01.2018 ರವರೆಗೂ ನಾನು ಕನಕಪುರ ಸಂಚಾರಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ08.02.2017 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆಧಾರದ ಮೇರೆಗೆ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 3/2017 ರಂತೆ ಪ್ರ.ವವ ದಾಖಲಿಸಿ ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಮತ್ತೊಂದು ದಾಖಲೆಯನ್ನು ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ.

ಅದೇ ದಿನ ತನಿಖೆಯನ್ನು ಮುಂದುವರಿಸಿ ಕೃತ್ಯ ನಡೆದ ಸ್ದಳಕ್ಕೆ ಭೇಟಿ ಮಾಡಲಾಗಿ ಸದರಿ ಸ್ದಳವನ್ನು ಚಾಸಾ-1 ರವರು ತೋರಿಸಿದ್ದು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ದಳ ಪರಿಶೀಲನೆ ಮಾಡಿ ಸ್ದಳ ಪಂಚನಾಮೆಯನ್ನು ಮಧ್ಯಾಹ್ನ 1.15 ರಿಂದ 2.15 ರವರೆಗೂ ತಯಾರು ಮಾಡಿ ಕೃತ್ಯಕ್ಕೆ

ಸಂಬಂಧಿಸಿದ ವಾಹನವಾದ ಲಗೇಜ್ ಆಟೋ ಕೆಎ-42-ಎಲ್-6234 ಹಾಗೂ ಕೆಎ-42-ಎಲ್-3065 ಮೋಟಾರು ವಾಹನವನ್ನು ಮಹಜರ್ ಮುಖಾಂತರ ಅಮಾನತು ಪಡಿಸಿಕೊಳ್ಳಲಾಯಿತು. ನಂತರ ಮುಂದಿನ ತನಿಖೆಗಾಗಿ ಸದರಿ ಕಡತವನ್ನು ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ದೂರನ್ನು ಗುರುತಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪ್ರ. ವವ ವನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಸ್ದಳ ಪಂಚನಾಮೆಯನ್ನು ಗುರುತಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯ ಕಾಲಕ್ಕೆ ಬರೆದ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪಂಚನಾಮೆ ಕಾಲಕ್ಕೆ ತೆಗೆದ ಐದು ಪೊಟೋಗಳಲ್ಲಿ ಮೂರು ಸದರಿ ಆಟೋಗೆ ಸಂಬಂಧಿಸಿದ್ದು ಹಾಗೂ 2 ಬೈಕಿಗೆ ಸಂಬಂದಿಸಿದ ಪೊಟೊಗೇಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 13 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಚಾಸಾ-1 ರವರು ಪ್ರಕರಣದಲ್ಲಿ ಮೃತ ಹೊಂದಿರುವ ವ್ಯಕ್ತಿಗೆ ಏನಾಗಬೇಕೆಂದು ನನಗೆ ಗೊತ್ತಿಲ್ಲ. ಅವರು ಒಬ್ಬರೇ ಬಂದ್ದಿದರು. ದೂರನ್ನು ಅವರೇ ಬರೆದುಕೊಂಡು ಬಂದಿದ್ದರು. ಕೇವಲ ಮೃತನ ಕುಟುಂಬಕ್ಕೆ ಅನುಕೂಲವಾಗಲಿ ಎಂದು ನಾನು ನಿಪಿ-1 ನ್ನು ತಯಾರಿಸಿ ಆರೋಪಿ ವಿರುದ್ದ ಸುಳ್ಳು ಪ್ರ.ವವ

ತಯಾರು ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಮಹಜರ್ ಗೆ ಅದೇ ದಿನ ಹೋಗಿದ್ದು ಪಂಚರನ್ನು ಸ್ಥಳಕ್ಕೆ ಕರೆಸಲಾಯಿತು. ನಮ್ಮ ಠಾಣೆಯಿಂದ ಅಪಘಾತ ಸ್ಥಳ 3 ಕಿ, ಮೀಟರ ಆಗುತ್ತದೆ. ನಾನು ನನ್ನ ಸ್ವಂತ ಗಾಡಿಯಾದ ಕೆಎ-42-ಎಲ್-0351 ವಾಹನದಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಪಂಚನಾಮೆಗೆ ಚಾಸಾ-1 ರಿಂದ 3 ರವರು ಸಹಿ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಹಾಗೂ ನಕಾಶೆಯನ್ನು ಠಾಣೆಯಲ್ಲಿ ಬನಾವಟ್ ಮಾಡಲಾಗಿರುತ್ತದೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**